ಸಜ್ಜೆ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು:

ಸಜ್ಜೆ ಒಂದು ಪ್ರಮುಖ ಏಕದಳ ಧಾನ್ಯ ಬೆಳೆಯಾಗಿದ್ದು, ಮುಂಗಾರು ಹಂಗಾಮಿನಲ್ಲಿ ಒಂದೇ ಬೆಳೆಯಾಗಿ ಮತ್ತು ಅಂತರ ಬೆಳೆಯಾಗಿಯೂ ಬೆಳೆಯಲಾಗುತ್ತಿದೆ. ಇತ್ತಿಚ್ಚಿನ ದಿನಗಳಲ್ಲಿ ಸಜ್ಜೆ ಕ್ಷೇತ್ರ ಆವರಿಕೆ ಇಳಿಮುಖ ವಾಗುತ್ತಿರುವುದು ಆತಂಕದ ವಿಷಯ. ಇದಕ್ಕೆ ಹಲವಾರು ಕಾರಣಗಳಿವೆ ; ರೈತರು ಕಡಿಮೆ ಫಲವತ್ತತೆ ಮಣ್ಣಿನಲ್ಲಿ ಬೆಳೆಯುತ್ತಿರುವುದು, ತೇವಾಂಶದ ಕೊರತೆ, ಉತ್ಪಾದಕತೆ ಕಡಿಮೆ ಯಾಗುತ್ತಿರುವುದು ಇತ್ಯಾದಿ. ಸಜ್ಜೆ ಅತಿ ಕಡಿಮೆ ಖರ್ಚಿನಲ್ಲಿ ಬೆಳೆಯುವಂತಹ ಬೆಳೆಯಾಗಿದ್ದು, ದಿನನಿತ್ಯ ಬೇಕಾಗುವ ಪೌಷ್ಟಿಕ ಆಹಾರವನ್ನು ಒದಗಿಸುತ್ತದೆ. ಇದೊಂದು ಬಡವರ ಅತಿ ಬೇಡಿಕೆಯ ಬೆಳೆಯಾಗಿದ್ದರಿಂದ ಕ್ಷೇತ್ರ ಆವರಿಕೆ ಮತ್ತು ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಗಮನಹರಿಸುವುದು ಅತ್ಯಾವಶ್ಯಕ. ಸಾಮಾನ್ಯವಾಗಿ ಈ ಬೆಳೆಯನ್ನು ಖುಷ್ಕಿ ಪ್ರದೇಶದಲ್ಲಿ ಬೆಳೆಯುತ್ತಿರುವುದರಿಂದ ಸಜ್ಜೆ ಖುಷ್ಕಿ ಬೇಸಾಯ ತಾಂತ್ರಿಕತೆಗಳ ಬಗ್ಗೆ ಇಲ್ಲಿ ವಿವರಿಸಿದೆ.

ಮಾಗಿ ಉಳುಮೆ ಮತ್ತು ಭೂಮಿ ತಯಾರಿಕೆ :

ಮಾಗಿ ಉಳುಮೆ ಮಾಡುವುದರಿಂದ ಭೂಮಿಯಲ್ಲಿರುವ ಕಸಕಡ್ಡಿಗಳು ಕಳತು ಸಾವಯವ ಅಂಶಗಳನ್ನು ಭೂಮಿಗೆ ಒದಗಿಸುತ್ತವೆ ಮತ್ತು ಭೂಮಿಯಲ್ಲಿರುವ ಕೀಟ ಕೋಶಗಳು ಬಿಸಿಲಿನ ತಾಪಿಗೆ ಸಾಯುತ್ತವೆ. ಮಾಗಿ ಉಳುಮೆ ಮಾಡಿದ ನಂತರ ಭೂಮಿಯನ್ನು ಹದಮಾಡಬೇಕು. ಎಲ್ಲಾ ಬೇಸಾಯ ಪದ್ಧತಿಗಳನ್ನು ಇಳಿಜಾರಿಗೆ ಅಡ್ಡಲಾಗಿ ಅನುಸರಿಸುವುದರಿಂದ ಬಿದ್ದಂತಹ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಅನುಕೂಲವಾಗುತ್ತದೆ.

ಸಾವಯವ ಗೊಬ್ಬರ ಬಳಕೆ :

ಪ್ರತಿ ಹೆಕ್ಟೇರ್‌ಗೆ 2.5 ರಿಂದ 3 ಟನ್ನ ತಿಪ್ಪೆ ಗೊಬ್ಬರವನ್ನು ಬಿತ್ತನೆಗೆ 2 ರಿಂದ 3 ವಾರಗಳ ಮುಂಚೆಯೇ ಮಣ್ಣಿನಲ್ಲಿ ಮಿಶ್ರಣ ಮಾಡಬೇಕು.

ಸೂಕ್ತ ಬೀಜ ಹಾಗೂ ತಳಿ ಆಯ್ಕೆ:

ಹಲವಾರು ವರ್ಷಗಳ ಸಂಶೋಧನೆ ಪ್ರಕಾರ ಈ ಪ್ರದೇಶಕ್ಕೆ ಐಸಿಟಿಪಿ–8203, ಐಸಿಎಮ್‌ವಿ–221 ಹಾಗೂ ಸಂಕರಣ ತಳಿಯಾದ ಎಮ್. ಎಚ್.–946 ಸೂಕ್ತ ಎಂದು ತಿಳಿದು ಬಂದಿದೆ. ಈ ಎಲ್ಲ ತಳಿಗಳು 70–85 ದಿನಗಳಲ್ಲಿ ಕಟಾವಿಗೆ ಬರುತ್ತವೆ. ಬೆಳೆ ಕೆಳಗೆ ಬೀಳುವುದಿಲ್ಲ ಮತ್ತು ಬೆಳೆ ಹೆಚ್ಚು ಕವಲೊಡೆದು ಒಂದೇ ಸಮನಾಗಿ ತೆನೆಗಳು ಬರುತ್ತವೆ. ಎಮ್. ಎಚ್.–946 ಕೇದಿಗೆ ಮತ್ತು ಎಲೆ ತುಕ್ಕು ರೋಗಕ್ಕೆ ನಿರೋಧಕ ಶಕ್ತಿ ಹೊಂದಿದೆ.

ಬಿತ್ತನೆ ಕಾಲ: ಜೂನ್ ಮತ್ತು ಜುಲೈ ತಿಂಗಳಗಳು ಸಜ್ಜೆ ಬಿತ್ತನೆ ಮಾಡಲು ಸೂಕ್ತವಾಗಿದೆ.

ಬಿತ್ತನೆಗೆ ಬೇಕಾಗುವ ಬೇಸಾಯ ಸಾಮಗ್ರಿಗಳು: ಸೂಕ್ತವಾದ ತಳಿ ಆಯ್ಕೆ ನಂತರ, ಪ್ರತಿ ಹೆಕ್ಟೇರ್‌ಗೆ 4 ಕಿ.ಗ್ರಾಂ ಬೀಜವನ್ನು ಸಿದ್ಧತೆ ಮಾಡಿಕೊಳ್ಳಬೇಕು. ನಂತರ ಬಿತ್ತನೆ ಬೀಜಗಳನ್ನು ಜೈವಿಕ ಗೊಬ್ಬರಗಳಾದ ಅಜೋಸ್ಪಿರಿಲಂ (500 ಗ್ರಾಂ/ ಹೆಕ್ಟೇರ್) ಮತ್ತು ರಂಜಕ ಕರಗಿಸುವ ಗೊಬ್ಬರ (375 ಗ್ರಾಂ/ ಹೆಕ್ಟೇರ್) ದಿಂದ ಬೀಜೋಪಚಾರ ಮಾಡಬೇಕು.

ಬಿತ್ತನೆ ಬೀಜಗಳನ್ನು ಶೇಕಡಾ 8 ರಷ್ಟು ಉಪ್ಪಿನ ದ್ರಾವಣದಲ್ಲಿ (80 ಗ್ರಾಂ ಉಪ್ಪನ್ನು 1 ಲೀಟರ್ ನೀರಿನಲ್ಲಿ ಬೆರೆಸುವುದು) ಹಾಕಿ ತಿಲೀಂದ್ರದ ಎರ್ಗಾಟ್ ಕಣಗಳನ್ನು ಬೇರ್ಪಡಿಸಿ, ಬೀಜಗಳನ್ನು ನೀರಿನಲ್ಲಿ ತೊಳೆದು ನೆರಳಿನಲ್ಲಿ ಒಣಗಿಸಿ ಬಿತ್ತನೆಗೆ ಉಪಯೋಗಿಸಬೇಕು.

ಬಿತ್ತನೆ : ಬಿತ್ತನೆ ಬೀಜಗಳನ್ನು ಅಜೋಸ್ಪಿರಿಲಮ್ ಹಾಗೂ ರಂಜಕ ಕರಗಿಸುವ ಗೊಬ್ಬರಗಳಿಂದ ಬೀಜೋಪಚಾರ ಮಾಡಿದನಂತರ 45–60 ಸೆಂ.ಮೀ ಸಾಲಿನಿಂದ ಸಾಲಿಗೆ ಅಂತರದಲ್ಲಿ ಹಾಗೂ 15 ಸೆಂ.ಮೀ ಬೀಜಗಳಿಂದ ಬೀಜಕ್ಕೆ ಅಂತರದಲ್ಲಿ ಬಿತ್ತನೆ ಮಾಡಬೇಕು. 50 ಕಿ.ಗ್ರಾಂ ಸಾರಜನಕ ಮತ್ತು 25 ಕಿ.ಗ್ರಾಂ ರಂಜಕ ಒದಗಿಸುವ ರಾಸಾಯನಿಕ ಗೊಬ್ಬರಗಳನ್ನು ಮಣ್ಣಿನಲ್ಲಿ ಬೆರೆಸಬೇಕು.

ಬೀಜೋಪಚಾರ ವಿಧಾನ:

ಪಾವ ಕಿಲೋ (250 ಗ್ರಾಂ) ಬೆಲ್ಲ ಅಥವಾ ಸಕ್ಕರೆಯನ್ನು ಒಂದು ಲೀಟರ್ ನೀರಿನಲ್ಲಿ ಕರಗಿಸಿ ಸ್ವಲ್ಪ ಹೊತ್ತು ಕುದಿಸಿ ಪಾಕ ಮಾಡಿ ಆರಿಸಬೇಕು. ನಿಗದಿತ ಜೈವಿಕ ಗೊಬ್ಬರವನ್ನು ಈ ದ್ರಾವಣದಲ್ಲಿ ಹಾಕಿ ಸರಿಯಾಗಿ ಕಲಸಬೇಕು. ಬಿತ್ತನಗೆ ಬೇಕಾಗುವ ಬೀಜಗಳ ಮೇಲೆ ಈ ದ್ರಾವಣ ಸುರಿಯಬೇಕು. ನಂತರ ನೆರಳಿನಲ್ಲಿ ಒಣಗಿಸಿ ಕೂಡಲೆ ಬಿತ್ತನೆ ಮಾಡಬೇಕು.

ಅಂತರ ಬೆಳೆ : ಸಜ್ಜೆಯನ್ನು ತೊಗರಿಯೊಂದಿಗೆ 2 : 1 ಸಾಲಿನಲ್ಲಿ ಬಿತ್ತಬಹುದು.

ಕಳೆ ನಿಯಂತ್ರಣ: ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿದ್ದಾಗ ಬಿತ್ತನೆ ಮಾಡಿದ ದಿನ ಅಥವಾ

ಮರುದಿನ ಹೆಕ್ಟೇರಿಗೆ 1.30 ಗ್ರಾಂ ಅಟ್ರಾಜಿನ್ ಶೇ 50 ರ ನೀರಿನಲ್ಲಿ ಕರಗುವ ಪುಡಿಯನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ ಮಣ್ಣಿನ ಮೇಲೆ ಸಿಂಪರಿಸಬೇಕು. ಪ್ರತಿ ಹೆಕ್ಟೇರಿಗೆ 750 ಲೀಟರ್ ದ್ರಾವಣ ಅವಶ್ಯಕ.

ಬಿತ್ತನೆಯಾದ 30–35 ದಿವಸಗಳ ನಂತರ ಎರಡು ಸಜ್ಜೆ ಸಾಲುಗಳ ಮಧ್ಯದಲ್ಲಿ ರಂಟೆಯಿಂದ ಅಥವಾ ಅಂತರ ಬೇಸಾಯ ಮಾಡುವುದರಿಂದ ಹೆಚ್ಚಿನ ಮಳೆಯ ನೀರು ಸಂಗ್ರಹವಾಗಿ ಅಧಿಕ ಇಳುವರಿ ಪಡೆಯಬಹುದು.

ಸಸ್ಯ ಸಂರಕ್ಷಣೆ:

ಕೀಟಗಳು: ಸಾಮಾನ್ಯವಾಗಿ ಸಜ್ಜೆಗೆ ಬೊಬ್ಬೆದುಂಬಿ ಮತ್ತು ರಸಹೀರುವ ತಿಗಣೆಗಳು ಬಾಧೆಯನ್ನುಂಟು ಮಾಡುತ್ತವೆ. ಇದರಿಂದ ಕಾಳುಗಳು ಜೊಳ್ಳಾಗಿ ಕಪ್ಪಾಗಿ ಕಾಣುವವು. ಇವುಗಳನ್ನು ಹತೋಟಿಯಲ್ಲಿಡಲು ಹೆಕ್ಟೆರ್‌ಗೆ 8 ಕಿ.ಗ್ರಾಂ. ಮೆಲಾಥಿಯಾನ್ ಪುಡಿಯನ್ನು ಧೂಳಿಕರಿಸಬೇಕು. ಸುರಳಿನೊಣ ಹತೋಟಿಗಾಗಿ 0.66 ಮೀ, ಲೀ ಡೈಮಿಥೋಯೇಟ್ 30% ಇ. ಸಿ. ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು.

ರೋಗಗಳು:

ತೆನೆ ಜಿಗಿ ರೋಗ: ಸಕ್ಕರೆ ಪಾಕದಂತಹ ದ್ರವವು ತೆನೆಗಳಿಂದ ಜಿನುಗುವುದಲ್ಲದೆ, ಎಲೆಗಳ ಮೇಲೆ ಕಪ್ಪಾಗಿ ಕಾಣುವವು. ಇದರಿಂದ ತೆನೆಗಳಲ್ಲಿ ಕಾಳಿನ ಸಂಖ್ಯೆ ಕಡಿಮೆಯಾಗುವವು. ಈ ಕೀಟಗಳ ಹತೋಟಿಗಾಗಿ ಶೇಕಡಾ 75 ರಷ್ಟು ತೆನೆ ಬಂದೊಡನೆಯೇ 2.0 ಗ್ರಾಂ ಜೈರಾಮ್ 80 ಡಬ್ಲ್ಯೂಪಿ ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಎಲೆ ತುಕ್ಕು ರೋಗ: ಎಲೆಗಳ ಮೇಲೆ ಸಣ್ಣ ಸಣ್ಣ ಚುಕ್ಕೆಗಳಾಗಿ ಎಲೆಗಳು ತಾಮ್ರ ಬಣ್ಣಕ್ಕೆ ತಿರುಗುವವು. ಇದರಿಂದ ಇಳುವರಿ ಕಡಿಮೆಯಾಗುವುದು.

ಕೇದಿಗೆ ರೋಗ (ಹಸಿರು ತೆನೆ ರೋಗ): ಗಿಡದ ಬೆಳೆವಣಿಗೆ ಕುಂಠಿತವಾಗುವುದು. ಎಲೆಗಳು ಹಳದಿ ಅಥವಾ ಕಂದು ಬಣ್ಣಕ್ಕೆ ತಿರುಗಿ, ಎಲೆಗಳ ತುದಿವರೆಗೆ ಅಗಲವಾದ ಗೆರೆಗಳು ಕಾಣುವವು. ರೋಗ ಪೀಡಿತ ಸಸ್ಯಗಳಲ್ಲಿ ಹೆಚ್ಚಿನ ಕವಲುಗಳು ಬರುವವು. ತೆನೆಗಳು ಭಾಗಶ: ಅಥವಾ ಪೂರ್ತಿಯಾಗಿ ಹಸಿರು ಬಣ್ಣದ ಸಣ್ಣದಾದ ತಿರುಚಿದ ಎಲೆಗಳಾಗಿ ಪರಿವರ್ತನೆಯಾಗುವವು.

ಈ ಎರಡು ರೋಗಗಳನ್ನು ನಿಯಂತ್ರಣ ಮಾಡಲು 2.0 ಗ್ರಾಂ ಜೈನೆಬ್ 75 ಡಬ್ಲ್ಯೂ. ಪಿ. ಅಥವಾ ಮ್ಯಾಂಕೊಜೆಬ್‌ನ್ನು 75 ಡಬ್ಲ್ಯೂ. ಪಿ. ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸಬೇಕು. ಕೇದಿಗೆ ರೋಗ ತಗಲಿದ ಗಿಡಗಳನ್ನು ಬೇರು ಸಮೇತ ಕಿತ್ತು ನಾಶಪಡಿಸಬೇಕು.

ಇಳುವರಿ: ಹೆಕ್ಟೇರ್‌ಗೆ 15 ಕ್ವಿಂಟಾಲ್ ಕಾಳು ಮತ್ತು 2.5–4.0 ಟನ್ ಮೇವನ್ನು ಪಡೆಯಬಹುದು.

ಲೇಖಕರು: ಡಾ. ಮಲ್ಲರೆಡ್ಡಿ
ಡಾ. ತಿಮ್ಮಣ್ಣ
ಡಾ. ಶ್ರೀವಾಣಿ ಜಿ.ಎನ್
ಇಂ. ವೀಣಾ ಟಿ.
ಡಾ. ಉಮೇಶ ಬಾಬು ಜಿ. ಎಸ್.
ಡಾ. ವೀಣಾ ಎಸ್. ಕಂಬಳಿ
ಡಾ. ಅಫ್ಸಾನಬಾನು ಮಾಣಿಕ್

ಪುಟ ವಿನ್ಯಾಸ &
ಅಕ್ಷರ ಜೋಡಣೆ : ಶ್ರೀ. ದೇವರಾಜ ನಾಯಕ್

ಗೌರವ ಸಲಹೆಗಾರರು : ಡಾ. ಎ ಆರ್ ಕುರುಬರ
ವಿಸ್ತರಣಾ ನಿರ್ದೇಶಕರು,
ಕೃ.ವಿ.ವಿ., ರಾಯಚೂರು

UASR/PC/LL-27E/2025-26

ಕೃಷಿ ವಿಶ್ವವಿದ್ಯಾಲಯ, ರಾಯಚೂರು
ಕೃಷಿ ವಿಸ್ತರಣಾ ನಿರ್ದೇಶನಾಲಯ
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಸಜ್ಜೆ ಸುಧಾರಿತ ಬೇಸಾಯ ಕ್ರಮಗಳು



ಪ್ರಕಾಶಕರು :

ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
ಅಂಚೆ ಪೆಟ್ಟಿಗೆ ಸಂಖ್ಯೆ–329, ರಾಯಚೂರು–584102
ದೂರವಾಣಿ ಸಂಖ್ಯೆ: 0832–220196
e-mail: kvkraichur@gmail.com